(b) 24 cases in respect of looting and theft of foodgrains and fodder and 207 cases in respect of other valuables have been registered.

(c) The Police Beats have been intensified and all the subordinate staff have been instructed to be diligent in the collection of information and to prevent the commission of these offences.

ಶ್ರೀ ಬಾಪುಗೌಡ ರಾಯಪ್ಪ.—ಮುಂದಿನ ಐದಾರು ತಿಂಗಳಲ್ಲಿ ಲೂಟಿ ಪ್ರಕರಣ ಮತ್ತು ಕಳ್ಳತನ ಜಾಸ್ತಿಯಾಗುವ ಸಂಭವವಿದೆ. ಆದುದರಿಂದ ಸ್ಪೆಷಲ್ಲಾಗಿ ಪೋಲೀಸ್ ಸ್ಕ್ವಾಡ ನೇಮಕ ಮಾಡಲು ವ್ಯವಸ್ಥೆ ಮಾಡಿದ್ದೀರಾ ?

†ಶ್ರೀ ಡಿ. ದೇವರಾಜ ಅರಸ್.—ತಾವು ಹೇಳಿದಂತೆ ಆ ಸಂಭವವಿರುವುದರಿಂದ ಅದನ್ನು ತಡೆಗಟ್ಟಲು ಹೆಚ್ಚು ಪೋಲೀಸನ್ನು ಕೊಡಲು ಪ್ರಯತ್ನ ಮಾಡುತ್ತೇವೆ.

ಶ್ರೀ ಎಂ. ಎಸ್. ಕೃಷ್ಣನ್.—1971 ರಲ್ಲಿದ್ದ ಈ ಪರಿಸ್ಥಿತಿ ಈಗ ಹೆಚ್ಚಾಗಿದೆಯೇ ? ಆಹಾರ ಧಾನ್ಯಗಳ ಅಭಾವದಿಂದ ಈ ರೀತಿ ಹೆಚ್ಚಾಗಿದೆಯೇ ?

ಶ್ರೀ ಡಿ. ದೇವರಾಜ ಅರಸ್.—ಈಗ ಹಿಂದಿನಗಿಂತ ಸ್ವಲ್ಪ ಜಾಸ್ತಿಯಾಗಿದೆ. Roughly I submit it may be taken as 14 cases more in that corresponding previous period.

ಶ್ರೀ ಎಂ. ಎಸ್. ಕೃಷ್ಣನ್.—ಆಹಾರ ಧಾನ್ಯಗಳ ಅಭಾವದಿಂದ ಇವು ಜಾಸ್ತಿಯಾಗುತ್ತಿವೆ ಎಂದು ಅಭಿಪ್ರಾಯ ಪಟ್ಟರೆ ಅದು ತಪ್ಪೇ ?

ಶ್ರೀ ಡಿ. ದೇವರಾಜ ಅರಸ್.—ನಾನು ತಪ್ಪಾಗುತ್ತದೆ ಎಂದು ಹೇಳಿಲ್ಲ. ಈ ದಿವಸದ ಪರಿಸ್ಥಿತಿಯಿಂದ ಹಾಗಾಗುತ್ತದೆ, ಹಿಂದೆಯೂ ಆಹಾರ ಧಾನ್ಯಗಳ ಕಳ್ಳತನವಾಗಿದೆ ಆದರೆ ಈ ಪ್ರಮಾಣದಲ್ಲಾಗಿಲ್ಲ. ಆಹಾರದ ಅಭಾವವಿರುವಾಗ ಆ ರೀತಿ ಆಗುವುದು ಮತ್ತು ಕೆಲವು ಕಡೆ ಹೋರ್ಡ್ ಮಾಡುವುದರಿಂದಲೂ ಆಗುವುದು, ಈ ಎರಡೂ ಇದೆ.

Sri J. P. SARWESH.—Whether it has not come to the notice of the Government that some of the unsocial elements are also instigating people to indulge in such things ?

Sri D. DEVARAJ ARS.—That is always there whenever there is such an occasion, there are elements who instigate others. Unsocial elements are always there. Society is not yet free from unsocial elements.

ಶ್ರೀ ಎಚ್. ಎಸ್. ಸಿದ್ದಪ್ಪ.—193 ಕಳ್ಳತನದ ಪ್ರಕರಣಗಳಲ್ಲಿ ಡಿಟೇಕ್ಟ್ ಆಗಿ ಕನ್‌ವಿಕ್ಷನ್ ಆಗಿರುವ ಸಂದರ್ಭಗಳೆಷ್ಟು ? ಎಷ್ಟು ರಿಕವರಿಯಾಗಿದೆ ?

ಶ್ರೀ ಡಿ. ದೇವರಾಜ ಅರಸ್.—ಅದಕ್ಕೆ ಬೇರೆ ಪ್ರಶ್ನೆ ಹಾಕಿದರೆ ತಿಳಿಸಬಹುದು.

Labour Engaged On Relief In Gulbarga District

344 Sri BAPUGOWDA RAYAPPA (Shahapur).—

Will the Minister for Revenue be pleased to state.

(*a*) the popuation of Gulbarga District ;

(*b*) the number of people provided with labour in this famine stricken district ?

Sri N. HUTCHAMASTHY GOWDA (MINISTER FOR REVENUE).—

(*a*) 17,39,671.

(*b*) Labour engaged on relief works as on 6-12-1972 is as follows:—

'64–Famine Relief Work's	77,753
Departmental works.	44 388
	1,22,141

ಶ್ರೀ ಬಾಪೂಗೌಡ ರಾಯಪ್ಪ.—ಮುಂದೆ 3 ತಿಂಗಳಲ್ಲಿ ಬರಗಾಲ ಪರಿಸ್ಥಿತಿ ಗಂಭೀರವಾಗ ಲಿರುವುದರಿಂದ ಆ ಸಂದರ್ಭದಲ್ಲಿ ಸುಮಾರು 6 ಲಕ್ಷ ಜನರಿಗೆ ಕೆಲಸ ಕೊಡಬೇಕಾಗುವುದು. ಅದ ಕ್ಕೇನು ಏರ್ಪಾಡು ಮಾಡಿದ್ದೀರಿ ?

†ಶ್ರೀ ಎನ್. ಹುಚ್ಚಮಾಸ್ತಿಗೌಡ.—ಇಡೀ ರಾಜ್ಯದಲ್ಲಿ ಇಂಥ ಸಂದರ್ಭ ಬಂದಾಗ ಮತ್ತು ಹೊರಗಿನ ರಾಜ್ಯದ ಇಂಥ ಸಮಸ್ಯೆಯ ಅಂಕ ಅಂಶ ನೋಡಿದಾಗ ಶೇಕಡ 10 ಅಥವ 20 ಮುಂದಿಗೆ ಕೂಲಿ ಕೆಲಸ ಒದಗಿಸಬೇಕಾಗಿ ಬರಬಹುದೆಂದು ಅಂದಾಜು ಮಾಡಬಹುದು. ಅದರಂತೆ ಸುಮಾರು ಎರಡು ಎರಡುವರೆಲಕ್ಷ ಜನರಿಗೆ ಕೆಲಸ ಒದಗಿಸಬೇಕಾಗುವುದು. ಇದಕ್ಕೆಲ್ಲಾ ಜೂನ್ 15 ರೊಳಗೆ ವ್ಯವಸ್ಥೆ ಮಾಡಲಾಗುವುದು.

ಶ್ರೀ ಬಾಪೂಗೌಡ ರಾಯಪ್ಪ.—ಸುಮಾರು ಶೇಕಡ 50 ರಿಂದ60 ರವರೆಗೆ ರೈತರು ಕೂಲ ಮಾಡಬೇಕಾದ ಪರಿಸ್ಥಿತಿ ಬರುವುದು. ಸುಮಾರು 2 ಲಕ್ಷಕ್ಕಿಂತ ಹೆಚ್ಚು ಜನರಿಗೆ ಕೆಲಸ ಒದಗಿಸ ಬೇಕಾಗಿ ಬರಬಹುದು. ಅಂಥ ಸಂದರ್ಭಗಳಲ್ಲಿ ಯಾವಯಾವ ಬಾಬಿನಲ್ಲಿ ಎಷ್ಟೆಷ್ಟು ಕೆಲಸ ಜನರಿಗೆ ಕೊಡಲು ವಿಚಾರ ಮಾಡಲಾಗಿದೆ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗಿರುವ ಹಾಗೆ ನಾವು ಅಂದಾಜು ಮಾಡಿರುವಂತೆ ಸುಮಾರು 2 ಲಕ್ಷದಿಂದ 20 ಲಕ್ಷದ ಸಾವಿರದವರೆಗೆ ಕೂಲಿ ಕೆಲಸಕ್ಕೆ ಜನರು ಬರಬಹುದು. ಸಾಯಿಲ್ ಕನಸರ್ವೇಷನ್ನಿನಲ್ಲಿ ಒಂದು ಲಕ್ಷ, ಮೇಜರ್ ಇರಿಗೇಷನ್ನಿನಲ್ಲಿ 10 ಸಾವಿರ, ಮೂಡಿಯಂ ಇರಿಗೇಷನ್ನಿ ನಲ್ಲಿ 20 ಸಾವಿರ, ಮೈನರ್ ಇರಿಗೇಷನ್ನಿನಲ್ಲಿ ಸುಮಾರು 20 ಸಾವಿರ, ರಸ್ತೆ ಕೆಲಸದಲ್ಲಿ 34 ಸಾವಿರ, ಇತರ ಕೆಲಸಗಳಲ್ಲಿ ಸುಮಾರು 46 ಸಾವಿರ ಹೀಗೆ 2 ಲಕ್ಷದ 20–25 ಸಾವಿರ ಮುಂದಿಗೆ ಕೆಲಸ ಕೊಡ ಬಹುದು, ಅಷ್ಟು ಜನ ಬರಬಹುದು ಎಂದು ವ್ಯವಸ್ಥೆ ಮಾಡಿದ್ದೇವೆ.

Sri RAJA PIDNAIK.—May I kanow what are the daily wages paid to labourers under famine relief works and in view of the rise in the prices, does not the Government realise that present wages are low ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ನಾವು ವ್ಯವಸ್ಥೆ ಮಾಡಿರುವ ಪ್ರಕಾರ ಒಂದು ದಿವಸಕ್ಕೆ ಗಂಡಾಳಿಗೆ ಕಡೇ ಪಕ್ಷ 2 ರೂಪಾಯಿ, ಹೆಣ್ಣಾಳಿಗೆ ಒಂದೂವರೆ ರೂಪಾಯಿ ಸಿಕ್ಕಲಿದೆ. ಅದರ ಪ್ರಕಾರ ಕೊಡಲಾಗುತ್ತಿದೆ.

ಶ್ರೀ ಕೆ. ಆರ್. ಶ್ರೀನಿವಾಸುಲು ನಾಯ್ಡು.—ಬರಗಾಲ ಪರಿಸ್ಥಿತಿ ಇದೆ, ಇನ್ನು ಮುಂದೆ ನಾಲ್ಕೈದು ತಿಂಗಳು ಬಹಳ ಕಷ್ಟಕರವಾಗುವುದು. ಜನ ಜಾನುವಾರುಗಳಿಗೆ ಬಹಳ ತೊಂದರೆ ಬರಲಿದೆ. ತೊಂದರೆಯಾಗದಂತೆ ನೋಡಿಕೊಳ್ಳಲು ಸರಕಾರ ಏನು ವ್ಯವಸ್ಥೆ ಮಾಡಿದೆ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಈಗ ನಮ್ಮ ಸರ್ಕಾರದವರು ಕೇಂದ್ರ ಸರ್ಕಾರದ ಸಹಾಯ ಪಡೆದು ಕೆಲಸ ಮಾಡತಕ್ಕ ವ್ಯವಸ್ಥೆಯನ್ನು ಯೋಚನೆಮಾಡಿ, ಅದರಂತೆ ಕಾರ್ಯಕ್ರಮ ಗಳನ್ನು ಗೊತ್ತುಮಾಡಿದ್ದೇವೆ. ಗುಲ್ಬರ್ಗ ಜಿಲ್ಲೆಯಲ್ಲಿ ಮಾರ್ಚಿ 15ನೇ ತಾರೀಖು ಅಥವಾ ಮಾರ್ಚಿ ಅಖೈರೊಳಗೆ 400 ಗ್ರಾಮಗಳಿಗೆ ಕುಡಿಯುವ ನೀರಿನ ತೊಂದರೆ ಬರಬಹುದು ಎಂದು ಅಂದಾಜುಮಾಡಿ ಅದಕ್ಕೆ ತಕ್ಕಂಥ ಎತ್ತಿನ ಗಾಡಿಗಳಿಂದ ನೀರು ಸಪ್ಲೈ ಮಾಡುವುದು ಟ್ರಕ್ಕುಗಳಿಂದ ಟ್ಯಾಂಕರ್ಸ್ ಹಾಕಿ ಕುಡಿಯುವ ನೀರನ್ನು ಸಪ್ಲೈ ಮಾಡುವುದು ಇಂಥ ವ್ಯವಸ್ಥೆಗಳನ್ನು ಮಾಡಿದ್ದೇವೆ. ದನಗಳ ಮೇವಿಗೆ ಎಲ್ಲದಕ್ಕಿಂತ ತೊಂದರೆ ಇದೆ ಎನ್ನುವುದನ್ನು ಈ ಸಭೆಯ ಗಮನಕ್ಕೆ ಅನೇಕ ವೇಳೆ

ತೆಗೆದುಕೊಂಡು ಬಂದಿದ್ದೇನೆ. ಇಲ್ಲಿಯವರೆಗೆ ಸುಮಾರು ಐದು ಸಾವಿರ ಟನ್‌ನಷ್ಟು ಹುಲ್ಲು, ಜೋಳದ ಕಡ್ಡಿಯನ್ನು ತಾಲ್ಲೂಕು ಡೆವೆಲಪ್‌ಮೆಂಟ್ ಬೋರ್ಡ್ ಮುಖಾಂತರ, ಸೊಸೈಟಿಗಳ ಮುಖಾಂತರ ಸರ್ಕಾರದವರು ಆ ಪ್ರದೇಶಗಳಿಗೆ ಕಳುಹಿಸಿರತಕ್ಕದ್ದು. ಅದರ ಜೊತೆಗೆ, ಒಂದೇ ಸಮನಾಗಿ ಎಷ್ಟು ಸಾಧ್ಯವಾಗುತ್ತದೋ ಅಷ್ಟು ಮೇವನ್ನು ಒದಗಿಸಿಕೊಡತಕ್ಕ ವ್ಯವಸ್ಥೆಯಾಗಿದೆ. ಆಹಾರ ಧಾನ್ಯ ಸುಮಾರು ಐದು ಸಾವಿರ ಟನ್‌ನಷ್ಟು ಗುಲ್ಬರ್ಗ ಜಿಲ್ಲೆಗೆ ಬೇಕಾಗುತ್ತದೆ. ಅದರ ಜೊತೆಗೆ ಇನ್ನೂ 2 ಸಾವಿರ ಟನ್ ಅವಶ್ಯಕವಾಗಿ ಬೇಕಾಗುತ್ತದೆಂದು ಅಧಿಕಾರಿಗಳಿಗೆ 7—8—9 ಸಾವಿರ ಟನ್‌ವರೆಗೂ ಅಲ್ಲಿಗೆ ಆಹಾರಧಾನ್ಯ ಹೋಗಬೇಕೆಂದು ಹೇಳಿದ್ದೇವೆ. ಕೇಂದ್ರ ಸರ್ಕಾರದ ಜೊತೆಯಲ್ಲಿ ವ್ಯವಹಾರ ಮಾಡಿ ಅಲ್ಲಿಗೆ ಅವಶ್ಯಕವಾಗಿ ಬೇಕಾದ ಧಾನ್ಯ ಒದಗಿಸಿ ಕೊಡುವುದಕ್ಕೆ ವ್ಯವಸ್ಥೆ ಮಾಡಿದ್ದೇವೆ.

ಶ್ರೀ ಕಾಗೋಡು ತಿಮ್ಮಪ್ಪ.—ಸರ್ಕಾರದ ಅಂಕಿ ಅಂಶಗಳ ಪ್ರಕಾರ ಗುಲ್ಬರ್ಗ ಜಿಲ್ಲೆಯಲ್ಲಿ ಕೃಷಿ ಕಾರ್ಮಿಕರು 1 ಲಕ್ಷ 75 ಸಾವಿರ ಜನ ಇದ್ದಾರೆ. ತಾವು ಕೆಲಸ ಕೊಟ್ಟಿರತಕ್ಕದ್ದು ಕೇವಲ 1 ಲಕ್ಷ 22 ಸಾವಿರ ಜನಕ್ಕೆ, ಇದರ ಜೊತೆಗೆ ಸಣ್ಣ ಹಿಡುವಳಿದಾರರು ಬೇಸಾಯದ ಕೆಲಸ ಇಲ್ಲದೆ ಇರುವುದರಿಂದ ಅವರೂ ಕೂಲಿ ಮಾಡತಕ್ಕ ಪ್ರಸಂಗ ಬಂದು ನೀವು ಅಂದಾಜು ಮಾಡಿರುವ ಎಂಟು ಲಕ್ಷ ಜನರೂ ಕೆಲಸಕ್ಕೆ ಬರುವ ಸಂಭವ ಇದೆ. ಆದ್ದರಿಂದ ಅಲ್ಲಿರತಕ್ಕ ಬೇಸಾಯ ಕೆಲಸಗಾರರಿಗೂ ತಾವು ಕೊಡುವ ಕೆಲಸ ಸಾಲುವುದಿಲ್ಲ. ನೀವು ಮಾಡಿರುವ ಅಂದಾಜು ಕ್ರಮಬದ್ಧವಾಗಿಲ್ಲ ಕ್ರಮವಾದ ಅಂದಾಜು ಮಾಡುತ್ತೀರಾ ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಆ ಜಿಲ್ಲೆಯ ಮೂರು ತಾಲ್ಲೂಕುಗಳಿಂದ ಶೋರಾಪುರ್, ಷಹಪುರ್ ಮತ್ತು ಯಾದಗಿರಿಯಲ್ಲಿ ರಾಟಿ ಬೆಳೆಯಾಗಿದೆ. ಅಲ್ಲಿ ವ್ಯವಸಾಯಗಾರರಿಗೆ ಸಭ್ಯ ಕೆಲಸ ಸಿಕ್ಕುತ್ತದೆ. ಇನ್ನು ಮಂಡೆ ಎರಡು ಲಕ್ಷವಲ್ಲ ಎರಡೂವರೆ ಲಕ್ಷ ಜನಗಳಿಗೆ ಕೂಲಿ ಒದಗಿಸಿಕೊಡುವುದಕ್ಕೋಸ್ಕರ ಇನ್ನೂ ಕೆಲವು ಮೈನರ್ ಇರಿಗೇಷನ್ ಕಾಮಗಾರಿಗಳನ್ನು ಲಘ್ವ್ ಇರಿಗೇಷನ್ ಕಾಮಗಾರಿಗಳ ಅಂದಾಜು ತಯಾರು ಮಾಡಿ ನಾವು ಕೆಲಸವನ್ನು ಗೊತ್ತು ಮಾಡಿದ್ದೇವೆ. ಅವನ್ನು ತೆಗೆದುಕೊಳ್ಳುವ ಸಂದರ್ಭ ಬಂದರೆ, ತೆಗೆದುಕೊಂಡು ಹೆಚ್ಚು ಜನಕ್ಕೆ ಕೆಲಸವನ್ನು ಒದಗಿಸಿ ಕೊಡುತ್ತೇವೆ.

Sri J. P. SARWESH.—May I know whether the Government is getting co-operation from all political parties in solving the miseries of the people of the drought-affected areas ?

ಶ್ರೀ ಎನ್. ಹುಚ್ಚಮಾಸ್ತಿಗೌಡ.—ಮಾನ್ಯ ಸದಸ್ಯರಿಗೆ ಗೊತ್ತಿರುವ ಹಾಗೆ ರಾಜ್ಯ ಮಟ್ಟದಲ್ಲಿ ಒಂದು ಸಮಿತಿಯನ್ನು ಮಾಡಿ ಎಲ್ಲಾ ಪಕ್ಷದ ಸದಸ್ಯರುಗಳು ಆ ಸಮಿತಿಯಲ್ಲಿದ್ದಾರೆ. ಯಾವ ಯಾವ ಪಕ್ಷದ ಸದಸ್ಯರು ಸಮಿತಿಯಲ್ಲಿಲ್ಲವೋ ಅವರನ್ನು ಅವಶ್ಯಕ ಇದ್ದರೆ ಸೇರಿಸಿಕೊಂಡು ಆ ಪ್ರದೇಶಗಳ ಬಗ್ಗೆ ಸಲಹೆ ಮಾಡುವುದಕ್ಕೂ ಮತ್ತು ಸಹಕಾರ ಕೊಡಬೇಕೆಂದೂ ಈ ಸಂದರ್ಭದಲ್ಲಿ ನಾನು ಪ್ರಾರ್ಥನೆ ಮಾಡುತ್ತೇನೆ.

Shifting of Cattle from Gulbarga District

347. Sri BAPU GOWDA RAYAPPA (Shahapur).—

Will the Minister for Revenue be pleased to state :—

(*a*) whether Government has issued any Government Order to shift the cattle of Gulbarga District to the District of Belgaum ;

(*b*) if so, the number of cattle shifted so far in the district ?